# ಆಹಾ ಸುದ್ದಿ!

★ ಸಸಿತೋಟ

ವಾಹನಗಳು ನಿಮ್ಮ ದಾರಿಗೆ ಅಡ್ಡಲಾಗಿ ನಿಂತರೆ ಏನು ಮಾಡಬೇಕು? ಬೈದುಕೊಳ್ಳುತ್ತ ಹೋಗುತ್ತೀರಿ ಅಥವಾ ಪೊಲೀಸ್‌ಗೆ ದೂರು ನೀಡುತ್ತೀರಿ. ಆದರೆ ಸ್ವೀಡನ್ನಿನ ಸ್ಟಾಕ್‌ಹೋಮಿನಲ್ಲಿ ಸೈಕಲ್ ತುಳಿಯುತ್ತ ಹೋಗುತ್ತಿದ್ದ ವ್ಯಕ್ತಿಗೆ ಅಡ್ಡಲಾಗಿ ಫಿಯಟ್ ಉನೊ ಕಾರು ನಿಂತಿತ್ತು. ಆತ ಸೈಕಲ್ ಇಳಿದವನೇ ಇಡಿ ಕಾರನ್ನೇ ಎತ್ತಿ ಸೈಕಲ್ ಮಾರ್ಗದ ಪಕ್ಕ ನಿಲ್ಲಿಸಿ ಮತ್ತೆ ತನ್ನ ಪಾಡಿಗೆ ತಾನು ಸೈಕಲ್ ತುಳಿಯುತ್ತ ಹೋದನಂತೆ. ಪೊಲೀಸರ ಜೊತೆಗಿನ ಪಂಚಾಯ್ತಿಗಿಂತ ಸ್ವಾವಲಂಬನೆ ಲೇಸು ಎನಿಸಿರಬಹುದು.



ಫ್ಲಾರಿಡಾದಲ್ಲಿ ಮನೆಯೊಂದಕ್ಕೆ ಕನ್ನ ಹಾಕಿದ ಜೇಕಬ್ ಆಭರಣ, ಹಣ ಜೇಬಿಗಿಳಿಸಿದ ನಂತರ ಅಡುಗೆ ಮನೆಯಲ್ಲಿದ್ದ ಚಿಕನ್ ಹಾಗೂ ಬಿಯರ್ ಅನ್ನು ಹೊಟ್ಟೆಗೆ ಇಳಿಸಿದನಂತೆ. ನಂತರ ಸೋಫಾದ ಮೇಲೆ ನಿದ್ರಿಸಿದ್ದ ಕಳ್ಳ ಮನೆ ಮಾಲೀಕರ ಕೈಗೆ ಸಿಕ್ಕಿಬಿದ್ದನಂತೆ. ಮನೆ ಮಾಲೀಕರು ಜೇಕಬ್ ವಿರುದ್ಧ ಆರೋಪ ಹೊರಿಸಿದರೆ, ಜೇಕಬ್ ಪೊಲೀಸರ ಎದುರು ಚಿಕನ್ ಮತ್ತು ಬಿಯರ್ ಮೇಲೆ ಆರೋಪ ಹೊರಿಸಿರಬಹುದು.



ಹವಾಯಿ ದ್ವೀಪದ ಸಾಗರದಲ್ಲಿ ಸರ್ಫಿಂಗ್ ಸ್ಪರ್ಧೆ ನಡೆಯಿತು. ಅಂತಿಂತಹ ಮಾಮೂಲು ಸ್ಪರ್ಧೆಯಲ್ಲ ಇದು, ಸರ್ಫಿಂಗ್ ಹಲಗೆಯ ಮೇಲೆ ಸಮತೋಲನ ಸಾಧಿಸುತ್ತ, ಜೊತೆಗಾತಿಯನ್ನೂ ನಿಭಾಯಿಸಬೇಕು. ಸಂಸಾರದಲ್ಲೇ ಜೊತೆಗಾತಿಯನ್ನು ನಿಭಾಯಿಸಿದವರಿಗೆ ಇದೇನು ಮಹಾ ಬಿಡಿ.

ಮರಣ ಶಯ್ಯೆಯಲ್ಲಿರುವವರ ಕೊನೆಯ ಮಾತು ಕುತೂಹಲಕಾರಿ. ಹೆಚ್ಚಿನವರು ಅಂದರೆ ಶೇ. 62ರಷ್ಟು ಮಂದಿ ಸಂಬಂಧದ ಕುರಿತು ಸಲಹೆ ನೀಡುತ್ತಾರೆ ಎನ್ನುತ್ತದೆ ಬ್ರಿಟನ್ನಿನ ಸಮೀಕ್ಷೆ. ತಾವು ತೀರಿಕೊಂಡ ಮೇಲೆ ಹೆಂಡತಿ/ ಗಂಡ ಹೇಗೆ ಖುಷಿಯಾಗಿರಬಹುದು ಎಂಬುದರ ಬಗ್ಗೆ ಸಲಹೆ ನೀಡುತ್ತಾರಂತೆ. ಮಕ್ಕಳಿಗಾದರೆ ತನ್ನಂತೆ ಕಷ್ಟಪಡಬೇಡಿ ಎಂದು ಒಂದೇ ವಾಕ್ಯದಲ್ಲಿ ಹೇಳಿಬಿಡಬಹುದು.



ಚೀನಾದಲ್ಲಿ ಇತ್ತೀಚೆಗೆ ರೋಬೊಕಪ್ ಫುಟ್ಬಾಲ್ ಪಂದ್ಯಾವಳಿ ನಡೆಯಿತು. ಮೈದಾನದಲ್ಲಿ ರೊಬಾಟ್‌ಗಳು ಕೇವಲ ಚೆಂಡು ಒದೆದು ಶಿಸ್ತು ಪ್ರದರ್ಶಿಸಿದರು. ಆದರೆ ಇತ್ತ ಪ್ರೇಕ್ಷಕರು ಕಾಲಿನ ಜೊತೆ ಕೈಗಳನ್ನೂ ಮಿಲಾಯಿಸಿ ರೊಬಾಟ್‌ಗಳು ಬಿಟ್ಟ ಕೆಲಸವನ್ನು ಪೂರ್ತಿ ಮಾಡಿದರಂತೆ.

ಇಂಗ್ಲೆಂಡ್‌ನ ಮೃಗಾಲಯಕ್ಕೆ ಭೇಟಿ ನೀಡಿದ ಗರ್ಭಿಣಿಯ ಹೊಟ್ಟೆಗೆ ಒರಂಗುಟನ್ (ಮಂಗ) ಗಾಜಿನ ಒಳಗಿನಿಂದಲೇ ತುಟಿ ಒತ್ತಿ ಮುತ್ತಿಕ್ಕಿತಂತೆ, ಅದೂ ಎರಡೆರಡು ಬಾರಿ. ಜೊತೆಗಿದ್ದ ಆಕೆಯ ಪತಿ ಜೇಯ್ ಕ್ಲರ್ಕ್‌ಗೆ ಹೊಟ್ಟೆಕಿಚ್ಚಾಗಿ ತನ್ನ ಹೊಟ್ಟೆಯನ್ನೂ ಅದರ ಪಂಜರದ ಗಾಜಿಗೆ ಒತ್ತಿದಾಗ ಕೆಟ್ಟ ನೋಟ ಬೀರಿ ಆಚೆ ಹೋಗು ಎನ್ನುವಂತೆ ಕೈಗಳಿಂದ ಬಾರಿಸಿತಂತೆ.



ಗರ್ಭಿಣಿಯ ಹೊಟ್ಟೆ, ಎಂದೂ ಕರಗದ ಕ್ಲರ್ಕ್‌ನ ಡೊಳ್ಳು ಹೊಟ್ಟೆ ನಡುವಿನ ವ್ಯತ್ಯಾಸ ಮಂಗನಿಗೂ ಅರ್ಥವಾಗಿರಬಹುದು.